ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಸಚಿವರು).—ಮಾನ್ಯ ವೆಂಕಟಸ್ವಾಮಯ್ಯನವರು ಹೇಳಿರತಕ್ಕಂಥ ವಿಷಯದ ಬಗ್ಗೆ ಮಾನ್ಯ ರೇಷ್ಮೆ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದರ ಜೊತೆಗೆ ಅವರು ಹೇಳಿರತಕ್ಕ ವಿಷಯದಲ್ಲಿ ರೇಷ್ಮೆ ಬೆಳೆಗಾರರಿಗೆ ನಿಜವಾಗಿಯೂ ತೊಂದರೆಯಾಗುತ್ತಿದ್ದರೆ, ಅದನ್ನು ಸರಿಪಡಿಸಲಿಕ್ಕೆ ಸರ್ಕಾರದಿಂದ ಆದಷ್ಟುಬೇಗ ವ್ಯವಸ್ಥೆಯನ್ನು ಮಾಡುತ್ತೇನೆ.

x) ಗ್ರಾಮಿಣಾಭಿವೃದ್ಧಿ ಬ್ಯಾಂಕ್‌ಗಳ ಆಡಳಿತ ಮಂಡಳಿಗಳಿಗೆ ಚುನಾವಣೆಯನ್ನು ನಡೆಸುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಉಪಾಧ್ಯಕ್ಷರೇ, ಬಹು ವರ್ಷಗಳ ಬಳಿಕ ರಾಜ್ಯಧ ಎಲ್ಲ ಗ್ರಾಮಿಣ ಕೃಷಿ ಮತ್ತು ಗ್ರಾಮಿಣ ಅಭಿವೃದ್ಧಿ ಬ್ಯಾಂಕುಗಳ ಆಡಳಿತ ಮಂಡಳಿಗಳಿಗೆ ಸೆಪ್ಟಂಬರ್ ತಿಂಗಳಲ್ಲಿ ಚುನಾವಣೆ ನಡೆಯುತ್ತಿದೆ, ಭೂ ಸುಧಾರಣಾ ಶಾಸನದಂತೆ ಹತ್ತು ಎಕರೆ ಒಳಗೆ ಭೂಮಿ ಒಡೆತನಸಿಕ್ಕಿದವರಿಗೆಲ್ಲ ಪರಿಹಾರ ಮನ್ನಾ ಮಾಡುವ ನಿರ್ಧಾರ ಸರ್ಕಾರ ಕೈಕೊಂಡಿದೆ.ರೈತರಿಗೆ ತ್ವರೆಯಿಂದ ಒಡೆತನ ಕೊಡಿಸಲಂ ಸರಕಾರವೇ ಹಿಂದೆ ಕೃಷಿ ಮತ್ತು ಗ್ರಾಮಿಣ ಅಭಿವೃದ್ಧಿ ಬ್ಯಾಂಕುಗಳಿಗೆ ಪ್ರೋತ್ಸಾಹ ನೀಡಿ ರೈತರಿಗೆ ಸಾಲ ಕೊಡಿಸಿತ್ತು, ಈ ಸಾಲ ಕೂಡ ಸರ್ಕಾರದ ನಿರ್ಧಾರದಂತೆ ಹತ್ತು ಎಕರೆವರೆಗೆ ಪರಿಹಾರ ಮನ್ನಾ ವ್ಯಾಪ್ತಿಯಲ್ಲಿ ಬರುವುದರಿಂದ, ಆ ರೈತರನ್ನು ಈ ವ್ಯಾಪ್ತಿಯಲ್ಲಿ ತೆಗೆದುಕೊಂಡು, ಮುಂದಿನ ತಿಂಗಳು ನಡೆಯುವ ಚುನಾವಣೆಯಲ್ಲಿ ಸುಸ್ತಿದಾರರಲ್ಲವೆಂದು ಪರಿಗಣಿಸಿ ಮಹಾಸಭೆ ಚುನಾವಣೆಯಲ್ಲಿ ಭಾಗವಹಿಸುವ ಅಧಿಕಾರ ದೊರಕುವಂತೆ ನೋಡಿಕೊಳ್ಳಬೇಕು ಮತ್ತು ಸರ್ಕಾರ ತನ್ನ ತೀರ್ಮಾನವನ್ನು ವಿಶಾಲ ವ್ಯಾಪ್ತಿಯಲ್ಲಿ ತೆಗೆದುಕೊಂಡು ತಾನು ನೀಡಿದ ಭರವಸೆ, ಆಡಿದ ಮಾತು ಉಳಿಸಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).— ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ಆಜ್ಞೆ ಮಾಡಿದಾಗ ಯಾರು ಯಾರು ಸರ್ಕಾರಕ್ಕೆ ಬಾಕಿ ಹಣ ಕೊಡಬೇಕಾಗಿತ್ತೋ ಅಂತಹವರ ಹಣವನ್ನು ಕೇಳುವುದಿಲ್ಲ, ಬಿಟ್ಟುಬಿಡುತ್ತೇವೆ ಎಂದು ಹೇಳಿದ್ದೆವು. ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್‌ನ ಮೂಲಕ ಯಾರು ಯಾರು ಸಾಲ ತೆಗೆದುಕೊಂಡು ತೀರಿಸಿದ್ದಾರೆ, ಅಂತಹವರಿಗೆ ಇದು ಅಕ್ಷರಶಃ ಅನ್ವಯವಾಗುವುದಿಲ್ಲ. ಆದರೂ ಸಹ ಸರ್ಕಾರ ಈ ಬಗ್ಗೆ ಯೋಚನೆ ಮಾಡುತ್ತಿದೆ. ಈ ಬಗ್ಗೆ ಸರ್ಕಾರ ಒಂದು ಅಂತಿಮ ತೀರ್ಮಾನ ಕೈಕೊಳ್ಳುವವರೆಗೆ ಯಾರು ಯಾರು ಸುಸ್ತಿದಾರರು ಇದ್ದಾರೆ, ಅಂತಹವರು ಚುನಾವಣೆಯಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ ಮತ್ತು, ಅಂತಹವರು ಓಟು ಮಾಡಲು ಅಧಿಕಾರ ಇರುವುದಿಲ್ಲ.

xi) ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಬರಪ್ಪೊಳೆ–ಕೊಂಗಣ ಅಣೆಕಟ್ಟು ನಿರ್ಮಿಸಿ ಜಲ ವಿದ್ಯುತ್ ಉತ್ಪಾದಿಸುವ ಯೋಜನೆ ಕೈಗೊಳ್ಳದಿರುವ ಬಗ್ಗೆ

ಶ್ರೀಮತಿ ಸುಮಾ ವಸಂತ್.—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಬರಪ್ಪೊಳೆ–ಕೊಂಗಣ ಎಂಬಲ್ಲಿ ಅಣೆಕಟ್ಟು ನಿರ್ಮಿಸಿ ಜಲ ವಿದ್ಯುತ್ ಉತ್ಪಾದಿಸುವ ಯೋಜನೆ ಕೈಕೊಳ್ಳುವುದರ ಬಗ್ಗೆ ಸರ್ಕಾರ ೩–೪ ವರ್ಷಗಳಿಂದ ಸರ್ವೆ ವಗೈರೆ ನಡೆಸುತ್ತಿದ್ದವು ಎಂದು ವರದಿಯಾಗಿದೆ.

ಕೊಡಗು ಜಿಲ್ಲೆ, ರಾಜ್ಯದಲ್ಲಿಯೇ ತೀರಾ ಚಿಕ್ಕ ಜಿಲ್ಲೆಯಾಗಿದ್ದು, ತನ್ನದೆ ಆದ ಸಂಸ್ಕೃತಿ ಹೊಂದಿದೆ. ಅಲ್ಲದೆ ಕಾಫಿ, ಕಿತ್ತಳೆ ಮತ್ತು ಏಲಕ್ಕಿ ಬೆಳೆಯುವುದರಲ್ಲಿಯೂ ವಿಶಿಷ್ಟವಾಗಿ ಬೆಲೆಯುಳ್ಳ ಮರ ಗಿಡಗಳನ್ನು ಹೊಂದಿದ ಕಾಡಿನಿಂದ ಕಂಗೊಳಿಸುವಲ್ಲಿಯೂ ವಿಶೇಷ ಸ್ಥಾನ ಹೊಂದಿದೆ. ಮೇಲೆ ಹೇಳಿದ ಜಲವಿದ್ಯುತ್ ಯೋಜನೆ ಏನಾದರೂ ಕಾರ್ಯಗತವಾದಲ್ಲಿ. ಅಜಮಾಸು ಒಂದು ಸಾವಿರ ಎಕರೆ ಅತ್ಯಂತ ಬೆಲೆಯುಳ್ಳ ಕಾಫಿ, ಕಿತ್ತಳೆ ಮತ್ತು ಏಲಕ್ಕಿ ಬೆಳೆಯುವ ಜಮೀನಿನ ಪ್ರಾಣಿಗಡೆಯಾಗಿ ಸಾವಿರಾರು ಜನರು ನಿರಾಶ್ರಿತರಾಗುವ ಸಂಭವವಿದೆ. ಇದಲ್ಲದೆ. ಈ ಜಲವಿದ್ಯುತ್ ಯೋಜನೆ ಕೈಗೊಂಡಲ್ಲಿ ಸಿಗಬಹುದಾದ ಶಕ್ತಿಯ ಪ್ರಮಾಣ ತೀರ ಕಡಿಮೆ ಎಂತಲೂ ತಲಾ ಯೂನಿಟ್‌ಗೆ ಖರ್ಚು ಬಹಳ ಬರುತ್ತದೆಂತಲೂ ಕೆಲವು ಪತ್ರಿಕೆಗಳು ವರದಿ ಮಾಡಿವೆ.